## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ

ಓ.ಎಸ್.ನಂ. 153/2023

| | | |
|---|---|---|
| ಹೆಸರು | ಸಿದ್ದಲಿಂಗಪ್ಪ ಎಂ. | ಪಿ.ಡಬ್ಲ್ಯೂ –1 |
| ತಂದೆಯ ಹೆಸರು | ಅಜ್ಜಪ್ಪ ಎಂ. | |
| ವಯಸ್ಸು | 46 ವರ್ಷ | |
| ಉದ್ಯೋಗ | ವ್ಯವಸಾಯ | ದಿನಾಂಕಃ **03–02–2024** |
| ವಾಸ ಸ್ಥಳ | ಕುಣೆಬೆಳಕೆರೆ ಗ್ರಾಮ. | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ** ವಾದಿ ಪರ ವಕೀಲರಿಂದಃ

ನಾನು ಈ ದಾವೆಯಲ್ಲಿ 4 ನೇ ವಾದಿ ಇದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಮಾಹಿತಿ ನೀಡಿ ಸಹಿ ಹಾಕಿರುತ್ತೇನೆ ಎಂದು ದೃಢೀಕರಿಸಿರುತ್ತೇನೆ.

ಈ ದಿನ ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳೆಂದು ಗುರುತಿಸಲಾಯಿತು.

| | |
|---|---|
| ನಿಪಿ–1 | ಸನ್ 1940–41 ನೇ ಸಾಲಿನ ಕುಣೆಬೆಳಕೆರೆ ಗ್ರಾಮದ ಹೌಸ್ ಲಿಸ್ಟ್ ಎಕ್ಸಟ್ರಾಕ್ಟ್ |
| ನಿಪಿ–2 | ಋಣಭಾರ ರಾಹಿತ್ಯ ಪ್ರಮಾಣ ಪತ್ರ |
| ನಿಪಿ–3 | ಕಟ್ಟಡ ಪರವಾನಿಗೆ ಪತ್ರ |
| ನಿಪಿ–4 | ಸನ್ 1988–89 ನೇ ಸಾಲಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ |
| ನಿಪಿ–5 | ಜುಬಾನೆ ಪಾಲು ವಿಭಾಗ ಪತ್ರ |
| ನಿಪಿ–6 | ಕುಣೆಬೆಳಕೆರೆ ಗ್ರಾಮ ಪಂಚಾಯಿತಿಯ ದಿಃ 15.06.2020 ರ ಸಭಾ ನಡವಳಿಯ ದೃಢೀಕೃತ ನಕಲು |
| ನಿಪಿ–7 | ಕುಣೆಬೆಳಕೆರೆ ಗ್ರಾಮ ಪಂಚಾಯಿತಿಯ ದಿಃ 06.09.2022 ರ ಸಭಾ ನಡವಳಿಯ ದೃಢೀಕೃತ ನಕಲು |
| ನಿಪಿ–8 | ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹರಿಹರರವರ ದಿಃ 21.09.2022 ರ ಜ್ಞಾಪನ ಪತ್ರ |

| | |
|---|---|
| ನಿಪಿ–9 | ವಂಶವೃಕ್ಷದ ದೃಢೀಕರಣ ಪತ್ರ |
| ನಿಪಿ–10 ಮತ್ತು 11 | ಎರಡು ಕರವಸೂಲಿ ರಸೀದಿಗಳು |
| ನಿಪಿ–12 ರಿಂದ 15 | 4 ಛಾಯಾಚಿತ್ರಗಳು |
| ನಿಪಿ–16 | ನಿಪಿ–12 ರಿಂದ 15 ಕ್ಕೆ ಸಂಬಂಧಿಸಿದ ಸಿ.ಡಿ. |

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

(ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರನ್ನು ಕೂಗಿಸಲಾಗಿ, ಪ್ರತಿವಾದಿ ಪರ ಯಾವುದೇ ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲಿಗಾಗಿ ಮುಂದೂಡಲು ಯಾವುದೇ ಸಕಾರಣಗಳು ಕಂಡು ಬಂದಿರುವುದಿಲ್ಲ ಆದ್ದರಿಂದ ಪ್ರತಿವಾದಿ ಪರ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹರಿಹರ